



# ಸೀರೆಯಿಂದ ಬೀನ್ ಬ್ಯಾಗ್

ಈ ಟ್ಯುಟೋರಿಯಲ್ ಅಲ್ಲಿ ನಾವು ಏನನ್ನು ರಚಿಸುತ್ತೇವೆ ಬೀನ್ ಬ್ಯಾಗ್

**ವಸ್ತುಗಳ ವಿವರ**

ಇದಕ್ಕೆ ನಿಮಗೆ ಬೇಕಾಗಿರುವುದು

ಒಂದು ಹಳೆಯ ಸೀರೆ ಅಥವಾ ನಿಮಗಿಷ್ಟವಾದ 3 ಮೀಟರ್ ಬಟ್ಟೆ

45 ಇಂಚು ಅಗಲವಿರುವ 3 ಮೀಟರ್ ಲೈನಿಂಗ್ ಬಟ್ಟೆ

ಚಾಲ್ಕ್

ಕತ್ತರಿ

10 ಇಂಚಿನ ಜಿಪ್ಪರ್


ಊಷಾ ಜನೋಮ್ ಜಿಪ್ಪರ್ ಫುಟ್


3 ಕೆಜಿ ಬೀನ್ ಬ್ಯಾಗ್ ಫಿಲ್ಲರ್

ಹೋಲುವಂತಹ ದಾರ


ಪಿನ್ ಗಳು








ಈಗ ಪ್ರಾರಂಭಿಸೋಣ.
ಸೀರೆಯನ್ನು ಬಲಭಾಗ ಬಲಭಾಗವನ್ನು ಕಾಣುವಂತೆ ಮಡಚಿ. ಇದನ್ನು ಉದ್ದವಾಗಿ ಮತ್ತು ಅಗಲವಾಗಿ ಮಾಡಬೇಕು. ಕತ್ತರಿಸಲು ಸುಲಭವಾಗುವಂತೆ ನಾವು ಟೆಂಪ್ಲೇಟನ್ನು ಮಾಡಿದ್ದೇವೆ. ಟೆಂಪ್ಲೇಟನ್ನು ಬಟ್ಟೆಯಮೇಲೆ ಇಡಬೇಕು. ನೀವೀಗ ನೋಡಬಹುದು ಮಡಿಕೆಯು ಕೆಳಭಾಗ ಮತ್ತು ಬಲಭಾಗದಲ್ಲಿ ಇದೆ. ಟೆಂಪ್ಲೇಟನ್ನು ಮಡಚಿರುವ ಭಾಗಕ್ಕೆ ಹೊಂದಿಸಿ.









ಬೀಡೆಡ್ ಪಿನ್ ಸಹಾಯದಿಂದ ಟೆಂಪ್ಲೇಟನ್ನು ಸ್ಥಳದಲ್ಲಿಟ್ಟು ಪಿನ್ ಮಾಡಿ. ಬಟ್ಟೇಯ ಎಲ್ಲಾ ಪದರ ಪಿನ್ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ ಇಲ್ಲಿ ಟೆಂಪ್ಲೇಟಿನ ಅಳತೆ ಇದೆ. ಚಾಲ್ಕನ್ನು ತೆಗೆದುಕೊಳ್ಳಿ ಮತ್ತು ಟೆಂಪ್ಲೇಟಿನಲ್ಲಿರುವಂತೆ ಟ್ರೇಸ್ ಮಾಡಿ. ಟೆಂಪ್ಲೇಟನ್ನು ಅನ್ಪಿನ್ ಮಾಡಿ ಪಕ್ಕಕ್ಕೆ ತೆಗೆದಿಡಿ. ಮಾರ್ಕ್ ಮಾಡಿರುವ ಗೆರೆ ಮೇಲೆ ಕತ್ತರಿಯಿಂದ ಕತ್ತರಿಸಿ. ಭದ್ರವಾದ ಕೈಯಿಂದ ಕತ್ತರಿಸಿ. ಕತ್ತರಿಸಿದ ಮೇಲೆ ಬಟ್ಟೆ ಹೀಗೆ ಕಾಣಬೇಕು. ಬಲಭಾಗ ಬಲಭಾಗವನ್ನು ನೋಡುವಂತೆ.
ಈಗ ಲೈನಿಂಗ್ ಬಟ್ಟೆ ಲೈನಿಂಗ್ ಬಟ್ಟೆಯನ್ನು ಸೀರೆ ಬಟ್ಟೆಯ ರೀತಿಯಲ್ಲೇ ಕತ್ತರಿಸಿ. ಈಗ ನಮ್ಮ ಹತ್ತಿರ ಬಟ್ಟೆಯ ಎರಡು ವಿಶಿಷ್ಟ ಪೀಸ್ ಗಳಿವೆ. ಲೈನಿಂಗ್ ಬಟ್ಟೆಯ ಮಡಿಕೆಯನ್ನು ತೆರೆಯಿರಿ ಮತ್ತು ಸೀರೆಯ ಮಡಚಿರುವ ಭಾಗವನ್ನು ಅದರ ಒಳಗಡೆ ಇಡಿ. ನೀವು ವೀಡಿಯೋದಲ್ಲಿ ಕಾಣಬಹುದು ನಮ್ಮ ಹತ್ತಿರ ನಾಲ್ಕು ವಿಶಿಷ್ಟ ಬಟ್ಟೆಯ ಪದರಗಳಿವೆ.





ಬಟ್ಟೆಯ ಉದ್ದದ ಭಾಗವನ್ನು ಇಲ್ಲಿ ತೋರಿಸಿರುವಂತೆ ಪಿನ್ ಮಾಡಿ. ಬಟ್ಟೆಯ ಎಲ್ಲಾ ಭಾಗದಲ್ಲೂ ಪಿನ್ ಹೋಗುವಂತೆ ಖಚಿತಪಡಿಸಿಕೊಳ್ಳಿ ಇದೇ ವಿಧಾನವನ್ನು ಇನ್ನೊಂದು ಕಡೆನೂ ಪುನರಾವರ್ತಿಸಿ. ಇದು ನಮ್ಮ ಹೊಲಿಗೆಯ ಮೊದಲನೆ ಗೆರೆ.




ಬಟ್ಟೆಯನ್ನು ಊಷಾ ಜನೋಮ್ ವಂಡರ್ ಸ್ಟಿಚ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ. ಬಟ್ಟೆಯನ್ನುಪ್ರೆಸ್ಸರ್ ಫುಟ್ ನ ಕೆಳಗೆ ಅಲೈನ್ ಮಾಡಿ. ಸ್ಟಿಚ್ ಸೆಲೆಕ್ಟರ್ ಡಯಲನ್ನು **A** ಮತ್ತು ಹೊಲಿಗೆಯ ಉದ್ದವನ್ನು 2.5ಗೆ ಇಡಬೇಕು. ಓಪೆನ್ ಆಗಿರುವ ಕಡೆಯಿಂದ ಹೊಲೆಯಲು ಪ್ರಾರಂಭಿಸಿ ಮತ್ತು ಹೊಲಿಗೆಯನ್ನು ಭದ್ರಗೊಳಿಸಲು ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಹಾಕಲು ನೆನಪಿನಲ್ಲಿಡಿ. ಎಲ್ಲಾ 4 ಪದರ ಅಲೈನ್ ಆಗಿದೆಯೇ ಎಂದು ಖಚಿತಪಡಿಸಿ.ಬಟ್ಟೆಯ ಪೂರ್ತಿ ಉದ್ದಕ್ಕೂ ಬಟ್ಟೆಯ ಅಂತ್ಯದ ಮಡಕೆ ತಲಪುವವರೆಗೂ ಹೊಲೆಯಿರಿ. ಪ್ರೆಸ್ಸರ್ ಫುಟನ್ನು ತೆಗೆದು ದಾರವನ್ನು ಕತ್ತರಿಸಿ.





ಇದೇ ವಿಧಾನವನ್ನು ಬಟ್ಟೆಯ ಇನ್ನೊಂದು ಕಡೆನೂ ಇದೇ ವಿಧಾನವನ್ನು ಮಾಡಬೇಕು. ಎಲ್ಲಾ 4 ಬಟ್ಟೆ ಅಲೈನಾಗಿದೆಯೇ ಎಂದು ಖಾತ್ರಿಪಡಿಸಿ. ಭದ್ರವಾದ ಕೈ ಪರಿಪೂರ್ಣವಾದ ನೇರ ಹೊಲಿಗೆ ಹಾಕಲು ಸಹಾಯವಾಗುತ್ತದೆ.





ನಾವೀಗ ಅಂಚುಗಳಿಗೆ ಅಚ್ಚುಕಟ್ಟಾದ ಫಿನಿಷ್ ಕೊಡಲು ಜಿಗ್ ಜಾಗ್ ಹೊಲಿಗೆಯನ್ನು ಹಾಕೋಣ. ಹೊಲೆದಿರುವ ಬಟ್ಟೆಯನ್ನುಪ್ರೆಸ್ಸರ್ ಫುಟಿನ ಕಳಗೆ ಅಲೈನ್ ಮಾಡಿ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು **C** ಜಿಗ್ ಜಾಗ್ ಹೊಲಿಗೆಗಾಗಿ ಮತ್ತು ಹೊಲಿಗೆಯ ಉದ್ದ 3ಕ್ಕೆ ಇಡಬೇಕು. ಮೇಲ್ಭಾಗದಿಂದ ಓಪೆನಿಂಗ್ ನಿಂದ ಪ್ರಾರಂಭಿಸಿ ಪೂರ್ತಿ ಬಟ್ಟೆಯ ಉದ್ದಕ್ಕೂ ಬ್ಯಾಗಿನ ಅಂತ್ಯ ಬರುವವರೆಗೂ ಹೊಲೆಯಿರಿ.ದಾರವನ್ನು ಕತ್ತರಿಸಿ. ಇದೇ ಜಿಗ್ ಜಾಗ್ ವಿಧಾನವನ್ನು ಬ್ಯಾಗಿನ ಇನ್ನೊಂದು ಭಾಗಕ್ಕೂ ಪುನರಾವರ್ತಿಸಿ. ನಿಮ್ಮ ಹೊಲಿಗೆ ಹೀಗೆ ಕಾಣಬೇಕು.





ಈಗ ಓಪೆನ್ ಎಂಡಿನ ಕೆಲಸ ಮಾಡೋಣ. ಬಟ್ಟೆಯನ್ನು ವೀಡಿಯೋದಲ್ಲಿ ತೋರಿಸಿರುವಂತೆ ಸೀಮ್ ಗಳು ಒಂದಕ್ಕೊಂದು ಹೊಂದುವಂತೆ ಜೋಡಿಸಿ.ಈ ಪಾಯಿಂಟಿನಲ್ಲಿ ಪಿನ್ ಮಾಡಿ.ಎಲ್ಲಾ ಓಪೆನ್ ಎಂಡ್ ಗಳಲ್ಲೂ ಪಿನ್ ಮಾಡಿ. ಈಗ ಪೂರ್ತಿಯಾದ ಬೀನ್ ಬ್ಯಾಗನ್ನು ಮೇಲಿಂದ ಕೆಳಕ್ಕೆ ತಿರುಗಿಸಿ. ಜಿಪ್ಪರನ್ನು ತೆಗೆದುಕೊಳ್ಳಿ, ಜಿಪ್ಪರಿನ ಮಧ್ಯಭಾಗವನ್ನು ಸೀಮ್ ಲೈನಿನ ಮೇಲೆ ಇಡಬೇಕು.









ಚಾಲ್ಕ್ ಪೀಸಿನಿಂದ ಎರಡೂ ತುದಿಯನ್ನು ಇಲ್ಲಿ ತೋರಿಸಿರುವಂತೆ ಮಾರ್ಕ್ ಮಾಡಿ.. ನಾವೀಗ ಮಾರ್ಕ್ ಮಾಡಿರುವ ಪಾಯಿಂಟಿನಿಂದ ತುದಿಯವರೆಗೂ ಹೊಲೆಯಬೇಕು. ಮಧ್ಯಭಾಗವನ್ನು ಓಪೆನಾಗಿದೆ ಎಂದು ಖಚಿತಪಡಿಸಿಕೊಳ್ಳಿ





ಬಟ್ಟೆಯನ್ನುಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಸೆಲೆಕ್ಟರ್ ಡಯಲನ್ನು **A** ಮತ್ತು ಹೊಲಿಗೆಯ ಉದ್ದವನ್ನು 2.5 ಗೆ ಇಡಬೇಕು. ಮಡಚಿರುವ ಭಾಗದಿಂದ ಪ್ರಾರಂಭಿಸಿ ಸೀಮ್ ನ ವರೆಗೂ ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆಯನ್ನು ಹಾಕಿ ಇದು ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಜಿಪ್ಪರ್ ಮಾರ್ಕಿಂಗ್ ಹತ್ತಿರ ನಿಲ್ಲಿಸಿ ರಿವರ್ಸ್ ಹೊಲಿಗೆ ಹಾಕಿ. ಇನ್ನೊಂದು ಕಡೆನೂ ಇದೇ ವಿಧಾನವನ್ನು ಅನುಸರಿಸಿ.ಮಾರ್ಕಿಂಗ್ ಇಂದ ಪ್ರಾರಂಭಿಸಿ ಮಡಚಿರುವ ಭಗದವರೆಗೂ ಹೊಲೆಯಿರಿ.

ಇದಾದ ಮೇಲೆ ಹೊಲೆಗೆಯಿಂದ ಹೊರಗಿರುವ ಹೆಚ್ಚಾದ ಬಟ್ಟೆಯನ್ನು ತೆಗೆಯಿರಿ. ನಾವು ಜಿಗ್ ಜಾಗ್ ಹೊಲಿಗೆಯನ್ನು ಎರಡೂ ಕಡೆ ಸೀಮ್ ಗಳಿಗೆ ಬೇರೆ ಬೇರೆಯಾಗಿ ಹಾಕಬೇಕು ಇದು ಫ್ರೆಯಿಂಗ್ ಆಗದಂತೆ ತಡೆಯುತ್ತದೆ. ಬಟ್ಟೆಯ ಒಂದು ಕಡೆಯನ್ನುಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ, ಬಲಭಾಗ ನಿಮ್ಮನ್ನು ನೋಡುವಂತೆ ಇರಬೇಕು. ಸ್ಟಿಚ್ ಸೆಲೆಕ್ಟರನ್ನು **C** ಮತ್ತು ಹೊಲಿಗೆಯ ಉದ್ದವನ್ನು 3 ಕ್ಕೆ ಇಡಬೇಕು. ಹೊಲೆಯಲು ಪ್ರಾರಂಭಿಸಿ ಎಲ್ಲಾ ಕಡೆ ಹೊಲೆಯಿರಿ ಫೋಲ್ಡಿಂದ ಫೋಲ್ಡಿಗೆ ಹೊಲೆಯಬೇಕು. ನಿಮ್ಮ ಹೊಲಿಗೆ ಹೀಗೆ ಕಾಣಬೇಕು.






ಈಗ ಜಿಪ್ಪರನ್ನು ಹೊಲೆಯೋಣ. ಜಿಪ್ಪರ್ ಗಾಗಿ ಇದ್ದ ಗ್ಯಾಪನ್ನು ತೆರೆಯಿರಿ. ಜಿಪ್ಪರ್ ನ ಬಲಭಾಗವನ್ನು ಬಟ್ಟೆಯ ಬಲಭಾಗದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಜಿಪ್ಪರ್ ನ ಕೆಳಭಾಗವನ್ನು ಕೆಳಭಾಗಕ್ಕೆ ಇಡಬೇಕು ಮತ್ತು ಜಿಪ್ಪರ್ ನ ಮೇಲ್ಭಾಗವನ್ನು ಮೇಲ್ಭಾಗಕ್ಕೆ ಇಡಬೇಕು. ಜಿಪ್ಪರ್ ನ ಒಂದು ಭಾಗ ಓಪೆನಿಂಗ್ ಇರುವ ಒಂದು ಭಾಗಕ್ಕೆ ಜೋಡಿಸಬೇಕು. ಮತ್ತು ಸಿಪ್ಪರ್ ನ ಇನ್ನೊಂದು ಭಾಗ ಓಪೆನಿಂಗ್ ನ ಇನ್ನೊಂದು ಭಾಗಕ್ಕೆ ಜೋಡಿಸಬೇಕು.

ನಾರ್ಮಲ್ ಪ್ರೆಸ್ಸರ್ ಫುಟನ್ನು ತೆಗೆದು ಊಷಾ ಜನೋಮ್ ಜಿಪ್ಪರ್ ಫುಟನ್ನು ಬದಲಾಯಿಸಬೇಕು. ಜಿಪನ್ನು ಸ್ವಲ್ಪ ತೆಗೆಯಿರಿ. ಇಲ್ಲಿ ತೋರಿಸಿರುವಂತೆ ಜಿಪ್ಪರನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು **A** ಮತ್ತು ಹೊಲಿಗೆಯ ಉದ್ದ 2.5 ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ ಜಿಪ್ಪರ್ನ ಕೊನೆವರೆಗೂ ಹೊಲೆಯಿರಿ. ಹೆಚ್ಚಾಗಿರುವ ದಾರವನ್ನು ಕತ್ತರಿಸಿ ಮತ್ತು ಇದೇ ವಿಧಾನವನ್ನು ಜಿಪ್ಪರ್ ನ ಇನ್ನೊಂದು ಕಡೆನೂ ಪುನರವರ್ತಿಸಿ.

ಇದು ಮುಗಿಯಿತು. ಬೀನ್ ಬ್ಯಾಗನ್ನು ಜಿಪ್ಪರ್ ಓಪೆನಿಂಗ್ನಿಂದ ತಿರುಗಿಸಿ. ಬೀನ್ಸನ್ನು ತುಂಬಿಸಿ . ಇದನ್ನು ನೀವು ಆನ್ಲೈನಲ್ಲಿ ಅಥವಾ ನಿಮ್ಮ ಹತ್ತಿರ ಅಂಗಡಿಯಲ್ಲಿ ಖರೀದಿಸಬಹುದು. ಜಿಪನ್ನು ಮುಚ್ಚಿದರೆ ಮುಗಿಯಿತು.

ನಿಮ್ಮ ಗೆಳೆಯರನ್ನು ಮನೆಗೆ ಕರೆದು ನಿಮ್ಮ ಹೊಸ ಪೀಠೋಪಕರಣವನ್ನು ತೋರಿಸಿ. ನಿಮ್ಮ ಲಿವಿಂಗ್ ರೂಮನ್ನು , ಬೆಡ್ ರೂಮನ್ನು ಮತ್ತು ಸ್ಟಡಿ ರೂಮನ್ನು ವಿನ್ಯಾಸ ಮಾಡಿಕೊಳ್ಳಬಹುದು. ಸೀರೆಯಿಂದ ಬೀನ್ ಬ್ಯಾಗ್ ಪ್ರಾಜೆಕ್ಟ್ ನಿಮಗೆ ಇಷ್ಟವಾಗಿದೆಯೆಂದು ಭಾವಿಸುತ್ತೇವೆ.